Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೫೮ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಾಯಲು [ಬಿಡಿ ಪ್ರತಿ 3 ಪೈ

10—5—1962

ಪ ವ. ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಇನ್ನೂ ತೀರ್ಮಾನ ಆಗಿಲ್ಲ

1957 ನೆಯ ಮಹಾ ಚುನಾವಣೆಯ ಒಂದು ಚುನಾವಣಿ ತಕರಾರು ಅರ್ಜಿ ಸುಪ್ರೀಂ ಕೋರ್ಟಿನಲ್ಲಿ ಅಪೀಲು ಹಂತದಲ್ಲಿದೆ ಎಂದು ಕಾನೂನು ಮಂತ್ರಿ ಶ್ರೀ ಎ. ಕೆ ಸೇನರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು. ಸುಪ್ರೀಂ ಕೋರ್ಟಿಗೆ ಕೆ ಕಾರ್ಡುಗಳು ಇನ್ನೂ ಬಂದಿರುವ ಕಾರಣ ಕೊಪ್ಪಲ್ ಪಾರ್ಲಿಮೆಂಟಿನ ಚುನಾವಣೆ ಅರ್ಜಿ ಹಾಗೆಯೇ ಇದೆ ಎಂದರು.

ಅಲ್ಜಿರಿಯ ರೀತಿ ಯುದ್ಧ

ಂಾವಲ್ಪಿಂಡಿಯಿಂದ ಬಂದಿರುವ ವರದಿಯ ಪ್ರಕಾರ, ಅಜಾದ ಕಾಶ್ಮೀರದ ಅಧ್ಯಕ್ಷ ಕೆ. ಎಂ ಕುರ್ಷಿದರು ಬಿ ಬಿ ಸಿ ಪ್ರತಿನಿಧಿಗೆ ಇತ್ತ ಸಂದರ್ಶನದಲ್ಲಿ ಅಲ್ಜೀರಿಯಾದ ಎಸಾದರಿಯಲ್ಲಿ ಕಾಶ್ಮೀರದ ಇತರ ಭಾಗವನ್ನು ಪಡೆಯಲು ಶಪಥ ಸ ಕಾರ್ಯ ನಿರ್ಧರಿಸಿದೆ ಎಂದರು. ಈ ಕಾರ್ಯಕ್ಕಾಗಿ ಚೀನಾವನ್ನು ಒಳಗೊಂಡು ಯಾವ ಭಾಗದಿಂದಲಾದರೂ ಸಹಾಯ ಪಡೆಯುವುದಾಗಿ ತಿಳಿಸಿದರು.

ಪ್ರಧಾನಿಗಳೊಡನೆ ಸಂಪರ್ಕ

ಕನ್ಯಾಸಿಸ್ಪ ಒಲಗಳಿಗೆ ಹಂಥ ವಿದ್ದುದಂ ಪರಿಸ್ಥಿತಿ ಸಂಬಂಧದಲ್ಲಿ ಬ್ರಿಟಿಷ ಪ್ರಧಾನಿ ಮ್ಯಾಕ್ಮಿಲ್ಲ್ ಪ್ರಧಾನಿ ನೆಹರು ರವರಿಂ ಸಂಪರ್ಕ ಪಡೆದಿರುವರು.

ಬಿಲ್ ಇಳಿವ ಸಂಭವ

62-63 ನೆಯ ಸಾಲಿನ ಅಂದಾಜು ಪಟ್ಟಿಯು ಮೇಲೆ ಪಾರ್ಲಿಮೆಂಟಿನ ಒಳ ಹಾಗೂ ಹೊರ ಭಾಗದಲ್ಲಿ ಟೀಕೆಗಳು ಬಂದುದಂ ದೆಸೆಯಿಂದ ಕೆಲವು ತಂಡ ಬಟ್ಟೆಯ ಮೇಲೆ ಅರ್ಥ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ತೆರಿಗೆ ಕಡಿಮೆ ಮಾಡುವ ಸಂಭವವಿದೆ.

× ರಾಜ್ಯಪಾಲರ ಭಾಷಣ ತಿರಿದಿದ್ದ ಶ್ರೀ ಬಿ. ಗೋಪಾಲಗೌಡರನ್ನು ವಿಧಾನ ಸಭೆಯು ಈ ಅಧಿವೇಶನಕ್ಕೆ ಸಸ್ಪೆಂಡ್ ಮಾಡಿದೆ

ಆಕಸ್ಮಿಕ ಯುದ್ಧ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯು ಥಾಂಟರು ನಿನ್ನೆ ಕೊಪರ್ಹೇಗನ್ನಲ್ಲಿ ಹೇಳಿಕೆಯನ್ನಿತ್ತು, ಆಕಸ್ಮಿಕವಾಗಿ ಯುದ್ಧವಾಗುವದು ಭಾರಿ ಸಾಧ್ಯವಿದೆ ಮತ್ತು ಅದು ದಿನವೂ ಬೆಳೆಯುತ್ತಿದೆ ಎಂದರು.

ದೇವಿಹಾಳುವ ಚಳುವಳಿ

ಮದ್ರಾಸು ರಾಜ್ಯದಲ್ಲಿ ದೇವಿಯನ್ನು ಹಾಕುವ ಚಳುವಳಿ ನಿನ್ನೆಯಿಂದ ಆರಂಭವಾಯಿತು.

ಆದರ್ಶ ಅಧ್ಯಕ್ಷರು

ಭಾರತದ ಪ್ರಥಮ ಅಧ್ಯಕ್ಷರನ್ನು ಕುರಿತು ದೆಹಲಿಯ ಆಕಾಶವಾಣಿಯಲ್ಲಿ ನಿನ್ನೆ ನಡೆದ ಪ್ರಸಾರದಲ್ಲಿ ಪ್ರಧಾನಿ ಪಂ|| ನೆಹರು ಮಾತನಾಡುತ್ತಾ, ಪರಿವರ್ತನೆ ಕಾಲದ ಹಂತದಲ್ಲಿ ಡಾ|| ರಾಜೇಂದ್ರ ಪ್ರಸಾದರು ಆದರ್ಶ ಅಧ್ಯಕ್ಷರಾಗಿದ್ದರು ಎಂದರು.

ಆಹಾರ ದಾಸ್ತಾನು

ಈ ವರ್ಷ ಮಾರ್ಚಿ ಅಂತ್ಯದ ವರೆಗೆ ಭಾರತ ಸರ್ಕಾರದ ವಶದಲ್ಲಿ 31-43ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳಿದ್ದವೆಂದು ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎ ಎಂ ಥಾಮಸರು ನಿನ್ನೆ ರಾಜ್ಯಸಭೆಯಲ್ಲಿ ತಿಳಿಸಿದರು.

ಗೃಹ ಮಂತ್ರಿ ದಾತಾರ್ ಹೇಳಿಕೆ

ಪಾಕಿಸ್ತಾನಿಯರು ಜಾರಿಗೆ ಬಂದಿರುವ ರಾಜ್ಯಗಳಲ್ಲಿ ಅಕ್ರಮ ಪ್ರವೇಶಮಾಡುವರೆಂಬುದನ್ನು ನಂಬಲು ಕಾರಣವೇ ಇಲ್ಲ ಎಂದಿರುವರು.

ಕುಡಿಯಲು ರಹದಾರಿ

ವಿದೇಶ ಪ್ರವಾಸಿಕರಿಗೆ ಅಖಿಲ ಭಾರತ ಮದ್ಯಪಾನ ರಹದಾರಿ ಕೊಡಲು ಹೊಸ ಯೋಜನೆ ಎಲ್ಲ ರಾಜ್ಯಗಳಲ್ಲಿ ಬೇಗನೆ ಬಂಲಿದೆ ಎಂದು ನವ ದೆಹಲಿ ವಾರ್ತೆ.

ಅಕೆ ಸಾಗಾಣಿಕೆ ಮೇಲಿನ ನರ್ಬಂಧ ರದ್ದು

ನವ ದೆಹಲಿ 9 — ಪಾರ್ಲಿಮೆಂಟಿನ ಆಹಾರ ಮತ್ತು ನ್ಯಾಯಸಾಯ ಸಲಹಾ ಸಮಿತಿಯಲ್ಲಿ ಆಹಾರ ಮಂತ್ರಿ ಶ್ರೀ ಎಸ್ ಕೆ. ಪಾಟೀಲರು ಮಾತನಾಡುತ್ತಾ, ಅಕ್ಕಿ ಮೇಲಿನ ಅನಿರ್ಬಂಧಿತ ಸಾಗಾಣಿಕೆಗೆ ಹಾಕಿರುವ ನಿರ್ಬಂಧವೆಲ್ಲ ಬೇಗನೆ ತೆಗೆಯಲು ಸಾಧ್ಯವೆಂದು ನುಡಿದರು ವ್ಯವಸಾಯಗಾರರಿಗೆ ತೊಂದರೆ ಆಗುವ ಜಿಲ್ಲೆ ನೀತಿಗೆ ಒಡಂಬಡಿಸದಿಲ್ಲವೆಂದರು

ಪರಿಣಾಮವಿಲ್ಲ

ವಾಯುಗುಣದ ಮೇಲೆ ಅಣು ಪ್ರಯೋಗ ಯಾವ ಪರಿಣಾಮವನ್ನು ಮಾಡಿದಿಲ್ಲವೆಂದ ಅಣು ಶಕ್ತಿ ಸಮಿತಿ ವಾಷಿಂಗ್ಟನ್ನಲ್ಲಿ ತಿಳಿಸಿದೆ

೦೦೦

ವಿಶ್ವಸಂಸ್ಥೆಯ ಸಂಬಲರ್ಹವಾದ ಕಡೆಯಿಂದ ಒಂದಿರುವ ವಾರ್ತೆಯಂತೆ ಕಾಶ್ಮೀರದ ವಿಷಯದಲ್ಲಿ ಭಾರತಕ್ಕೆ ತಿರುವ ತನ್ನ ಬೆಂಬಲವನ್ನು ವಾಪಸು ಪಡೆಯುವಂತೆ ರಷ್ಯವನ್ನು ಪಾಕಿಸ್ತಾನ ಕೇಳಿದೆ

ವಿಧವೆಗೆ ಮೋಸ

ಜೋಧ್ಪುರ 8 — ಕೋರ್ಟು ವಿಭಾಗದ ಬರ್ಡ್ ಗ್ಯಾಮದಲ್ಲಿ ವಿಧವೆಯೋರ್ವಳಿಗೆ ಸಾಧು ವೇಷದ ಒರ್ವನು ರೂ. 40 ಸಹಸ್ರಕ್ಕೆ ಮೋಸ ಮಾಡಿದನು ಅಕೆಯ ಹಸ್ತವನ್ನು ನೋಡಿ ಸಾಧು ಕೆಲವು ಕೃತಿಗಳನ್ನು ನಡೆಸಬೇಕೆಂದು ಹೇಳಿ 2 ವಾರಗಳಾದ್ದನೆಂದು ಹೇಳಲಾಗಿದೆ ಅಭರಣ ಪೆಟ್ಟಿಗೆಯು ಬಳಿ (300 ತೊಲಾ ಚಿನ) ಹಾವು ಬಿಟ್ಟು ಅದು ಅವಳ ಗಂಡನ ಪ್ರೇತವೆಂದು ಹೇಳಿ ಅದರಿಂದ ಪಾರಾಗಲು ಚಿನ್ನವನ್ನು ಖಾಲಿ ಡಬ್ಬಿಕ್ಕೆ ಹಾಕಲು ತಿಳಿಸಿದನು. ರಾತ್ರಿ ಮಲಗಿದ್ದಾಗ ಅಪಹರಿಸಿ ಹೋದನು.

ಕೊಲೆ, ಆತ್ಮಹತ್ಯೆ

ನಿನ್ನೆ ಸಂಜೆ ಬೆಂಗಳೂರು ಬಳಿಯ ಸಗುಡಿ ಬೆಳೆ ಗೋವಿಂದಪ್ಪ ಎಂಬೆಯಲ್ಲಿರುವ ಒಂದು ಪಠಾರದಲ್ಲಿ 38 ವರ್ಷದ ಸಂಸಾರಿಕಾಪ್ ತನ್ನ ಈರ್ವರು ಮಕ್ಕಳನ್ನು (1 ತಿಂಗಳ ಮಗು ಸೇರಿ) ಕೊಚ್ಚಿ ಮಾಡಿ, ಪತ್ನಿ ಹಾಗೂ ಈರ್ವರು ಪುತ್ರಿಯರನ್ನು ಗಾಯಗೊಳಿಸಿ, ತಾನೂ ಮಚ್ಚಿನಿಂದ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡರು

ಶವ ಪೂಜೆ

ಬುದ್ಧಿಭವನ ಆದಾಗ್ಯೂ ಸಾಕ್ಷಿಕಾರಾಗಿದ್ದ ಶ್ರೀ ಅಶ್ವತ್ಥ ಎಂಬವರು ಕಳೆದ ಮಾಹೆ 26 ರಂದು ಕಾಲವಾದರು. ಯೋಗ ಎಂದು ಭಾವಿಸಿದ್ದ ಕಾರಣ ಅವರ ಶವವನ್ನು ಹೂಳಲಾಯಿತು ಸಮಾಧಿಯಿಂದ ಓಂ ಶಬ್ದ ಬಂದಿದೆಂದು, ಮುಚ್ಚಿದ್ದ ಬಂಡೆ ಒಡೆಯಿತೆಂದು ಕೆಲವರು ಅಬ್ಬರಿಸಿದರು. ಅನಂತರ ಶವವನ್ನ ಈಚೆಗೆ ತೆಗೆದು, ಪೂಜೆಸಿ ಮತ್ತೆ ಹೂಳಿದರು.

ಕೇಂದ್ರದ ಕರೆ

ಶ್ರೀ ನಿಜಲಿಂಗಪ್ಪನವರು ವಿಧಾನಸಭೆಗೆ ಚುನಾಯಿತರಾಗಿರುವ ಈಗಿನ ಪರಿಸ್ಥಿತಿಯಲ್ಲಿ ಮಾತುಕತೆ ನಡೆಸಲು ದೆಹಲಿಯಿಂದ ಮೈಸೂರು ನಾಯಕರಿಗೆ ಕರೆ ಬಂದಿದೆ

ನಾಳೆಯ ಸಂಚಾರ

ಅಸ್ಥಾನ ಮಹಾವಿದ್ವಾ ದರ್ಶಾಧಿಕಾರಿ
ದೈವಜ್ಞ-ಶಿಖಾಮಣಿ
ಸಂದರ್ಶಪ್ಪ ಜೋಯಿಸರಿಂದ

11 ಪಶ್ಚಿಮ ಅಶ್ಲೇಷ

ದಾಲ್ಮಿಯಾರವರು ಜೈಲಿನಲ್ಲಿ

ನವದೆಹಲಿ 9— ಪ್ರಸಿದ್ಧ ಕೈಗಾರಿಕೋದ್ಯೋಮಿ ರಾಮಕೃಷ್ಣ ದಾಲ್ಮಿಯಾರವರು ತಮಗೆ ವಿಧಿಸಲಾಗಿರುವ 2 ವರ್ಷ ಸಾದಾ ಸಜೆಯನ್ನು ಅನುಭವಿಸಲು ದೆಹಲಿ ಸೆಂಟ್ರಲ್ ಜೈಲಿಗೆ ತೆರಳಿದರು

ರಾಜಕೀಯ ನಿವೃತ್ತಿವೇತನ

ನವದೆಹಲಿ 9— ಒಟ್ಟು ಸುಮಾರು 5500 ಜನರಿಗೆ ರಾಜಕೀಯ ನಿವೃತ್ತಿವೇತನಗಳನ್ನು ನೀಡಲಾಗುತ್ತಿದ್ದು, ಅದಕ್ಕಾಗಿ ಪ್ರತಿವರ್ಷ 25 ಲಕ್ಷ ರೂಗಳನ್ನು ವೆಚ್ಚಮಾಡಲಾಗುತ್ತಿದೆ

ವಿನಿಮಯೋಲ್ಲಂಘನ ಪ್ರಸಂಗಗಳು

62 ನೇ ಏಪ್ರಿಲ್ ತಿಂಗಳಲ್ಲಿ ವಿದೇಶೀ ವಿನಿಮಯ ನಿಯಂತ್ರಣ ನಿಯಮಗಳನ್ನು ಉಲ್ಲಂಘಿಸಿದ 55 ಪ್ರಕರಣಗಳನ್ನು ಕಂಡು ಹಿಡಿಯಲಾಯಿತೆಂದೂ, ವಿವಿಧ ಬಗೆ ಅಪರಾಧಗಳಿಗೆ ಒಟ್ಟು 691೦೦ ರೂಗಳ ದಂಡವನ್ನು ವಿಧಿಸಲಾಯಿತೆಂದೂ ಪ್ರಕಟವಾಗಿದೆ.

ಭಾರತ ಸರಕಾರ ಜಾಹಿರಾತುಗಳಿಗೆ ಖರ್ಚು ಮಾಡಿದ ಹಣ

ನವದೆಹಲಿ 9— ಭಾರತದ ಇಂಗ್ಲೀಷು ಪತ್ರಿಕೆಗಳಲ್ಲಿ 32೦60 ಜಾಹಿರಾತುಗಳೂ, ಇನ್ನಿತರ ಭಾಷಾ ಪತ್ರಿಕೆಗಳಲ್ಲಿ 28595 ಜಾಹಿರಾತುಗಳೂ ಕಳೆದ 1951 ಏಪ್ರಿಲ್ ತಿಂಗಳಿಂದ 1962 ರ ಫೆಬ್ರವರಿಯವರೆಗೆ ಪ್ರಕಟವಾಗಿದ್ದು ಅವುಗಳಿಗೆ ಕ್ರಮವಾಗಿ ರೂ 3874204 ಮತ್ತು ರೂ 2964327 ಖರ್ಚಾಗಿವೆ ಎಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು

ಅಂಚೆ ಮತ್ತು ತಂತಿ ಪ್ರಗತಿ

ಭಾರತದ ಅಂಚೆ ಮತ್ತು ತಂತಿ ಇಲಾಖೆಯು 61-62 ರಲ್ಲಿ ಒಟ್ಟು 4252 ದ. ಲಕ್ಷ ಅಂಚೆ ವಸ್ತುಗಳನ್ನು ರವಾನಿಸುವ ನಿರೀಕ್ಷೆ ಇಟ್ಟುಕೊಂಡಿದೆ : ಜೊತೆಗೆ 39-2 ದ ಲಕ್ಷ ಟೆಲಿಗ್ರಾಮುಗಳನ್ನೂ ಕಳುಹಿಸುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ — 1961 ಮಾರ್ಚಿ 31 ರಂದು ಇಲಾಖೆಯಲ್ಲಿದ್ದ ಸಿಬ್ಬಂದಿಯ ಸಂಖ್ಯೆ 382000 ; 1962 ಮಾರ್ಚಿ ಹೊತ್ತಿಗೆ ಇದು 400000 ಕ್ಕೂ ಹೆಚ್ಚುವುದು ಅನಿವಾರ್ಯವಾಯಿತು ಎಂದೂ ಇಲಾಖೆಯು ವಾರ್ಷಿಕ ವರದಿ ಅಂದಾಜು ಮಾಡಬಹುದು.

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ — ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

SHAKTI SUDHA

A Superb Tonic

ವುಡ್‌ಲಾಂಡ್ ಮಹಿಮಾನ್ವಿತ 13 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಪ್ರಿಯ 3 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ-ಪರ್ದಾ-ರಂಜಿತ ಚಿತ್ರ] [ದಿನವಹಿ 3 ಆಟಗಳು]



ಅಮೇರಿಕಾ ಕಾರ್ಮಿಕ ವರ್ಗ ಅಭ್ಯುದಯ ಸಂಬಂಧಿಸಿದ ಚಿತ್ರಗಳು

For Quality Printing ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

L. N. Press ಅ ಶೋ ಕಾ ಫಾರ್ಮಸಿ

Sivarampet, Mysore ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharma Prechara Nirata M. S. Krishna Rao, at the Satyavadi Press Chamarajapuram, Mysore 4.